Doc-127 T-P-2

Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 277] ಶನಿವಾರ 28—6—47 [ಬಿಡಿ ಪ್ರತಿ 3 ಪೈ

ನ್ಯಾಯವಿಧಾಯಕ ಸಭೆ

ಕೈಗಾರಿಕೆಗಳಿಗೆ ಮೈಸೂರಿನಲ್ಲಿ ಉತ್ತೇಜನ

ಸ್ವಂ ಸು] ಬೆಂಗಳೂರು ಜೂ 25

ನ್ಯಾಯವಿಧಾಯಕ ಸಭೆಯು ಎಂಟನೇ ದಿವಸದ ಅಧಿವೇಶನ ಈ ದಿವಸ 12 ಘಂಟೆಗೆ ಸರಿಯಾಗಿ ರಾ|| ಪ್ರ|| ಹೆಚ್. ಬಿ. ಗುಂಡಪ್ಪಗೌಡರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು.

ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ಉಪ ಅಧಿಕಾರಿಗಳಾದ ಶ್ರೀ ಜೆ. ಬಿ. ಮುಲ್ಲಾರಾಧ್ಯರು 1947—48 ನೇ ವರ್ಷದಲ್ಲಿ ಒಂದು ಡಜನ್ ಗ್ರಾಮ ಕೈಗಾರಿಕಾ ಕೇಂದ್ರಗಳನ್ನು ಪ್ರಾರಂಭ ಮಾಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

ಮೂರು ವರ್ಷದ ಒಂದು ಯೋಜನೆ ಗ್ರಾಮಕೈಗಾರಿಕೆ ಬಗೆಗೆ ಸರ್ಕಾರದ ಪರಿಶೀಲನೆಯಲ್ಲಿದೆ. 18 ಕೈಗಾರಿಕೆಗಳು ಏರ್ಪಡಿಸಬೇಕು. ಎಂದು ಆ ಯೋಜನೆಯಲ್ಲಿ ಆಡಕವಾಗಿದೆ. ಸಂಸ್ಥಾನಾ ಮಳಿ ಅತಿ-ತ್ವರೆಯಲ್ಲಿಯೇ ವಸತಿ ಕೈಗಾರಿಕೆಗಳ ಬಗೆಗೆ ಸರ್ವೆ ನಡೆಯಲಿದೆ ಎಂದು ಕೆಲವು ಉಪ ಪ್ರಶ್ನೆಗಳಿಗೆ ಉತ್ತರವಾಗಿ ಶ್ರೀ ಮುಲ್ಲಾರಾಧ್ಯರು ತಿಳಿಸಿದರು.

ಚುನಾವಣೆ ಫಲಿತಾಂಶ

ಶ್ರೀ ಎನ್. ಚನ್ನಪ್ಪ ಶ್ರೀ ಆರ್ ಚನ್ನಿಗರಾಮಯ್ಯ ಶ್ರೀಮತಿ ಎಂ. ಆರ್ ಲಕ್ಷ್ಮಮ್ಮ ಮತ್ತು ಜಿ|| ಸಯ್ಯದ್ ಅಬುಲ್ ರಹಮಾನ್ ಇವರುಗಳು ಸಾರ್ವಜನಿಕ ಲೆಖ್ಖಾಚಾರ ಸಮಿತಿಗೆ ಆಯ್ಕೆಯಾಗಿದ್ದಾರೆ

ಬಟೇವಿಯಾ ಜೂ 26 — ಇಂಡೋನೇಷಿಯಾ ಪ್ರಧಾನಿ ಡಾ|| ಎಸ್ ಷೆರಿಯರ್ ಮತಭೇದದಿಂದ ತಮ್ಮ ಪದವಿಗೆ ರಾಜೀನಾಮೆ ಇತ್ತಿದ್ದಾರೆ

ಕರಾಚಿ ಜೂ 26 — ಪಾಕೀಸ್ತಾನವನ್ನು ಸೇರಬೇಕೆಂದು 33—26 ಓಟುಗಳಿಂದ ಸಿಂಧ್ ಶಾಸನ ಸಭೆ ನಿರ್ಧರಿಸಿದೆ.

ಮೈಸೂರು ಜೂ 26 — ಶ್ರೀ ಟಿ. ಎಸ್ ರಾಜಗೋಪಾಲಯ್ಯಂಗಾರ್ಯರು ಭಾರತ ರಾಜ್ಯಾಂಗ ಘಟನಾ ಸಮಿತಿಯ ಮೈಸೂರಿನ ಚುನಾವಣೆಯಲ್ಲಿ ಆಮೇದುವಾರರಾಗಲಿರುವರಂತೆ !

ಬೆಂಗಳೂರು ಜೂ 26 — ವೇತನ ಸಮಿತಿಯ ಕೂಸಿನ ಸಭೆ ಮುಂದಿನ 5 ಸಂಜೆ ಸೇರುವುದು.

ಅಂತರ್ರಾಷ್ಟ್ರೀಯ ವಿಚಾರಗಳು

— —

ಅಮೇರಿಕ ರಷ್ಯಗಳು ಪರಸ್ಪರ ಗುರ್ ಎಂದು ನೋಡಿಕೊಳ್ಳುತ್ತಿವೆ. ಮಿತ್ರ ರಾಜ್ಯ ಸಮಿತಿಯನ್ನು ಉಪೇಕ್ಷಿಸಿ ಅಮೇರಿಕಾ ತುರ್ಕಿ ಗ್ರೀಸುಗಳಿಗೆ ಆರ್ಥಿಕ ಸಹಾಯವನ್ನು ಮಾಡದೆ ಚೈನಾಕ್ಕೆ ಮಾಡಲೆಳಿದೆ. ಜಪಾನಿನಲ್ಲಿ ಭದ್ರವಾಗಿ ಕೂತುಕೊಂಡಿದೆ. ಆಸ್ಟ್ರೇಲಿಯಾಕ್ಕೆ ಸಹಾಯಮಾಡಬಲ್ಲದಾಗಿ ತಿಳಿಸಿದೆ. ಟ್ರೂಮ್ಯಾನ್ ಕೆನಡಾಕ್ಕೆ ಹೋಗಿ ಟಟ್ಟೂತ್ರ ಪ್ರಣಾಳಿಕೆಯನ್ನು ಕುರಿತು ಪ್ರಸಂಗಿಸಿದನು. ಯೂರೋಪು ಸಂಯುಕ್ತ ರಾಜ್ಯಗಳ ವಿಷಯವಾಗಿ ಜಾರ್ಜ್ ಮಾರ್ಷಲ್ ಪಥಗಳನ್ನು ತಯಾರು ಮಾಡಿದ್ದಾನೆ.

ಈ ಕೆಲಸಗಳನ್ನೆಲ್ಲವನ್ನೂ ಅಮೇರಿಕಾ ಸದ್ಬುದ್ಧಿಯಿಂದ ಮಾಡುತ್ತಿರುವದೇ, ಅಧಿಕಾರ ಪ್ರಾಬಲ್ಯಕ್ಕಾಗಿ ಮಾಡುತ್ತಿರುವದೇ ಎಂಬುದನ್ನು ಕಾಲವೇ ನಿರ್ಣಯಿಸುತ್ತದೆ ಅಮೆರಿಕಾ ವಿದೇಶಾಂಗ ವಿಧಾನವು ಅಮೇರಿಕಾ ಪ್ರಜೆಗಳ ಮನ್ನಣೆಯನ್ನು ಹೊಂದುತ್ತಿರುವದೇ ಇಲ್ಲವೇ ಎಂಬ ವಿಷಯವು 1948 ರಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ನಡೆಯುವ ಚುನಾವಣೆಗಳಲ್ಲಿ ತಿಳಿಯ ಬರ್ಮುತ್ತದೆ. ರಷ್ಯಾ ಮಾತ್ರ ಅಮೇರಿಕದ ಚರ್ಚೆಗಳನ್ನು ಅನುಮಾನದೊಂದಿಗೆ ನೋಡುತ್ತಿದೆ.

ರಷ್ಯಾವೇನೂ ಸುಮ್ಮನೇ ಕೂತುಕೊಂಡಿಲ್ಲ. ಜರ್ಮನಿಯಲ್ಲಿ ಕಮ್ಯೂನಿಸ್ಟು ಸರ್ಕಾರದ ಸ್ಥಾಪನೆ ಬಲ್ಗೇರಿಯಾದ ಪ್ರತಿ ಪಕ್ಷ ಸಭ್ಯರ ಅರೆಸ್ಟು ಚೈನಾದಲ್ಲಿಯ ಸಿಂಕಿಯಾಂಗು ರಾಷ್ಟ್ರದಲ್ಲಿಯ ಪಟ್ಟಣದ ಮೇಲೆ ಹೊರಮಂಗೋಲಿಯಾ ಅಶ್ವದಳಗಳು ಮುತ್ತಿಗೆಯನ್ನು ಹೂಡಿದ್ದೂ ಮೊದಲಾದ ಕೆಲಸಗಳಲ್ಲಿ ರಷ್ಯಾವಿನ ಕೈ ಇಲ್ಲದೆ ಇಲ್ಲ. ಈ ರಷ್ಯಾ ಚರ್ಚೆಗಳನ್ನು ಬ್ರಿಟನ್ ಅಮೇರಿಕೆಗಳು ಸಂಶಯಾತ್ಮಕವಾಗಿ ಪರಿಶೀಲಿಸುತ್ತಿವೆ.

ತುರ್ಕಿಯು ಸ್ವಾತಂತ್ರ್ಯವನ್ನು ಹೋಗಲಾಡಿಸಿಕೊಂಡೀತೆಂದೂ ಅಮೆರಿಕಾ ಬ್ರಿಟನ್ನುಗಳು ಇತರ ದೇಶಗಳ ವಿಚಾರಣಕ ವ್ಯವಹಾರಗಳಲ್ಲಿ ಕೈಹಾಕುತ್ತಿರುವವೆಂದೂ ರಷ್ಯಾ ಪತ್ರಿಕೆಗಳು ಆರೋಪಣೆ ಮಾಡುತ್ತಿವೆ. ಹಂಗೇರಿ ಬಲ್ಗೇರಿಯಾಗಳಲ್ಲಿ ರಷ್ಯಾದ ಕೈ ಇರುವದೆಂದು ಅಮೇರಿಕದ ಪ್ರಕಟಣೆ. ಆ ಯುದ್ಧ ವಿಸರ್ಜನೆಯಲ್ಲಿ ರಷ್ಯಾದ ಪ್ರತಿಪಾದನೆಯು ಬ್ರಿಟನ್ ಅಮೆರಿಕಾ ಫ್ರಾನ್ಸ್ ಚೈನಾಗಳು ಎದರಿಸುವಿಕೆ ಯೂರೋಪಿನಲ್ಲಿ ತನ್ನ ಪ್ರಾಬಲ್ಯವು ಹೆಚ್ಚಲು ರಷ್ಯದ ಪ್ರಯತ್ನ ವಿಕ್ಕ ಪ್ರಪಂಚವನ್ನು ರಷ್ಯಾಕ್ಕೆ ವಿರುದ್ಧ ಪಾರ್ಟಿಯಾಗಿ ತಯಾರು ಮಾಡಲು ಅಮೇರಿಕದ ಪ್ರಯತ್ನ ಈ ವಿಷಯುಗಳನ್ನು ಗಮನಿಸಿದಲ್ಲಿ ಪ್ರಪಂಚದಲ್ಲಿಯ ಈ ಎರಡು ಅಗ್ರ ರಾಜ್ಯಗಳಿಗೆ ಇನ್ನು ಕೆಲವು ಕಾಲಾನಂತರವಾದರೂ ಯುದ್ಧವು ಸಂಭವವೇ ಎಂದು ತೋರುತ್ತದೆ. ಅಮೆರಿಕಾ ನೂಜೀ ಉಪಾಧ್ಯಕ್ಷ ಹೆನ್ರಿವಾಲೇಸು ಕೂಡ ಈ ಅಭಪ್ರಾಯವನ್ನೇ ಹೊರಗೆಡವಿದ್ದಾನೆ.

ಅಹಮದಾಬಾದ್ ಜೂ 26 — ಎಲ್ಲಾ ವಿದ್ಯಾರ್ಥಿಗಳೂ ಹರಿಜನರೊಂದಿಗೆ ಭೋಜನ ಮಾಡಬೇಕೆಂದು ಪಿ ಆರ್ ಟ್ರೈನಿಂಗ್ ಕಾಲೇಜಿನ ಅಪ್ಪಣೆಯನ್ನು ಪ್ರತಿಭಟಿಸಿ 9 ಜನ ವಿದ್ಯಾರ್ಥಿಗಳು 3 ದಿವಸಗಳಿಂದ ಉಪವಾಸ ಮಾಡುತ್ತಿದ್ದು ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು.

ಬೊಂಬಾಯಿನಲ್ಲಿ ಗೋಳೀಬಾ

ಬೊಂಬಾಯಿ ಜೂ 27 — ಪ
ಲ್ ಮತ್ತು ಎಲ್‌ಫಿನ್‌ಸ್ಟೇ ರೋಡ್ ರೈಲ್ವೆ ಸ್ಟೇಷನ್ನುಗಳ ಹತ್ತಿರ ಮುಷ್ಕರ ಹಿಡಿದಿರುವ ರೈಲ್ವೆ ಕೆಲಸಗಾರರ ಗುಂಪು ಜಿ. ಐ. ಪಿ. ಮತ್ತು ಬಿ ಬಿ. ಸಿ. ಐ. ರೈಲುಗಳ ಮೇಲೆ ಗುಂಡು ಹಾರಿಸಿದರು. ಒಬ್ಬ ಸತ್ತನು 3 ಮಂದಿ ಗಾಯಗೊಂಡರು.

ಜಪಾನಿನಲ್ಲಿ ಹೋಟಲುಗಳು ಬಂದ್ !

ಟೋಕಿಯೋ ಜೂ 26 — ಆಹಾರಾಭಾವದ ಪ್ರಯುಕ್ತ ಜಪಾನಿನಲ್ಲಿ ಆ ಲ್ಲಿಯ ಎಲ್ಲಾ ಹೋಟಲುಗಳನ್ನು 6 ತಿಂಗಳವರೆಗೆ ಮುಚ್ಚಲು ಮಂತ್ರಿಮಂಡಲ ನಿಶ್ಚಯಿಸಿದೆ.

ಇಂದಿನ ವರ್ತಮಾನ

ಲಾಹೋರು ಜೂ 28 — ಪಂಜಾಬಿನಲ್ಲಿ ಗಲಭೆ ತಪ್ಪಿಸಿ ಶಾಂತಿ ನೆಲಸಲು ಗೌರ್ನರವರು ಸರ್ವ ಪಕ್ಷ ರಕ್ಷಣಾ ಸಮಿತಿಯನ್ನು ಸ್ಥಾಪಿಸಿರುವರು.

ಂ ಂ

ಕರೂರು ಜೂ 26 — ವೈದ್ಯಾಚಲದಿಂದ ಪಾಂಡಿಚರಿಯವರೆಗೆ ಸುಮಾರು 300 ಮಿಲಿಯ ಟನ್ ಕಲ್ಲಿಜ್ಜಲು ದೊರೆಯುವುದು ಪತ್ತೆಯಾಗಿದೆಯೆಂದು ಭಾರತ ಭೂಗರ್ಭ ಶಾಸ್ತ್ರ ಇಲಾಖಾ ಕೃಷ್ಣನ್ನರು ಹೇಳಿದ್ದಾರೆ.

ಂ ಂ

ಕಾರ್ಬೆರಾ ಜೂ 25— ಆಸ್ಟ್ರೇಲಿಯಾವು ಭಾರತಕ್ಕೆ ಗೋಧಿ ಕಳುಹಿಸುವುದೆಂದು ಹೇಳಲಾಗಿದೆ.

ಂ ಂ

ಕೊಲಂಬೊ ಜೂ 27— ಟರ್ನರ್ ಸ್ಟಾಕ್ ಎಂಬ ಬ್ರಿಟಿಷ್ ಹಡಗು ಮದ್ದುಗುಂಡು ತುಂಬಿಕೊಂಡು ಬರುತ್ತಿದ್ದಿತೆಂದೂ, ವಿಷ ಹತ್ತಿರ ಬೆಂಕಿ ಹತ್ತಿ ಸ್ಫೋಟವಾಯಿತೆಂದೂ ಹೇಳಲಾಗಿದೆ.

ಂ ಂ

ಲಾಹೋರು ಜೂ 26— ಲಾಹೋರಿನಲ್ಲಿ 12 ಕಡೆ ಅಗ್ನಿ ಪ್ರಕರಣಗಳು ಶೀರ್ವವಾಗಿದ್ದವು

ಂ ಂ

ಬೆಂಗಳೂರು ಜೂ 27— ಶ್ರೀ ರಾಮಚಂದ್ರ ಎಂಬುವನು ತನ್ನ ಮದುವೆಲಗ್ನಪತ್ರಿಕೆಯನ್ನು ಕೊಡಲು ಮೈಸೂರಿಗೆ ಮೋಟಾರು ಬೈಸಿಕಲ್ಲಿನಲ್ಲಿ ತನ್ನ ಸ್ನೇಹಿತನೊಂದಿಗೆ ಬರುತ್ತಿದ್ದಾಗ ಬಿಡದಿ ಹತ್ತಿರ ಸೈಕಲ್ಲು ಸೇತುವೆಗೆ ಬಡಿದು ಅವನು ಮೃತಪಟ್ಟನು. ಸ್ನೇಹಿತನಿಗೆ ತುಂಬಾ ಗಾಯವಾಗಿದೆ

ಇಂಡೋ ಚೈನಾ

ಇಂಡೋ ಚೈನಾ ಪರಿಸ್ಥಿತಿಯು ಇ ನ್ನೂ ವಿಷಮವಾಗಿಯೇ ಇದೆ. ಇಂ ಡೋ ಚೈನಾ ಸಮೈಕ್ಯತೆಸ್ಸಂಗೀಕ ರಿಸದೆ ಪ್ರತ್ಯೇಕವಾಗಿ ರಾಷ್ಟ್ರಗಳೊಂ ದಿಗೆ ಸಂಧಿ ಮಾಡಿಕೊಳ್ಳುವದಾಗಿ ತಿಳಿ ಸಿರುವ ಫ್ರೆಂಚರ ಸೂಚನೆಗಳನ್ನು ಡಾ|| ಹೋಷಿರ್ಮಿ ತೀವ್ರವಾಗಿ ನಿರಾಕರಿಸಿರು ವರು. ದೇಶ ವಿಭಜನೆಗೆ ಒಪ್ಪುವ ಯಾ ವ ಸಂಧಿಗೂ ತಾವು ಅಂಗೀಕರಿಸುವದಿ ಲ್ಲವೆಂದೂ ಕೊನೆಯವರೆಗೂ ಹೊಡೆದಾ ಡಬಲ್ಲವರಾಗಿರುವರೆಂದೂ ಪ್ರಪಂಚದ ಲ್ಲಿಯ ಅಭಿವೃದ್ಧಿ ಕಾಮುಕರೆಲ್ಲರೂ ತ ಮಿಗೆ ಸಹಾಯ ಮಾಡಬಲ್ಲರೆಂದೂ ಅ ತನು ತಿಳಿಸಿದ್ದಾನೆ (ಜ್ವಾ)

ವೀಟ್‌ನಾಂ ವಿದ್ಯಾರ್ಥಿಗಳ ವೀರೋಚಿತ ಸಮರ

ವೀಟ್‌ನಾಂ ಸ್ವಾತಂತ್ರ್ಯ ಸಾಧನೆ ಗಾಗಿ ಪ್ರಾರಂಭಿಸಲ್ಪಟ್ಟ ಉದ್ಯಮದಲ್ಲಿ ಸಾವಿರಗಟ್ಟಲೆ ವಿದ್ಯಾರ್ಥಿಗಳು ಜೈಲಿಗೆ ಹೋಗುವರು, ದೇಶಾಂತರಗಳಿಗೆ ಫ್ರೆಂ ಚು ಸರ್ಕಾರದವರಿಂದ ಹೊಡೆದೂಡಲ್ಪ ಟ್ಟರು, ಗಲ್ಲಿಗೆ ಏರಿಸಲ್ಪಟ್ಟರು, ದೇಶ ಸ್ವಾತಂತ್ರ್ಯಕ್ಕಾಗಿ ನಾನಾ ಬಾಧೆಗಳ ನ್ನನುಭವಿಸಿದ ಈ ಯುವತೀ ಯುವಕ ರನ್ನು ವೀಟ್‌ನಾಂ ವಿಸ್ಮರಿಸಲಾರದು. ಇ ವರ ಆಡಿಗಳ ಗುರ್ತಿನಲ್ಲಿ ದೇಶದಲ್ಲಿಯ ಕಾರ್ಮಿಕ ಕರ್ಷಕರೆಲ್ಲರೂ ನಡೆದಿದ್ದ ರಿಂದಲೇ ವೀಟ್‌ನಾಂನಿಂದ ಫ್ರೆಂಚು ಸಾಮ್ರಾಜ್ಯವಾದಿಗಳನ್ನು ಹೊರಡಿಸಬ ಲ್ಲವರಾದರು. (ಮಾ. ಭೂ)

ಯಾನಾಂನಲ್ಲಿ ಫ್ರೆಂಚು ಅಡಳಿತ

ಅಲ್ಲಿಯ ಫ್ರೆಂಚು ಸರಕಾರದವರು ಏನು ಮಾಡುವರೆಂದರೆ, ಯಾರಾದರೂ ಯಾರ ಮೇಲಾದರೂ ಫಿರ್ಯಾದು ಮಾ ಡಿದಲ್ಲಿ ಫಿರ್ಯಾದಿಯನ್ನೂ ಅಪರಾಧಿಯ ನ್ನೂ ಮೊದಲು ಕೆಲವು ದಿವಸಗಳವರೆಗೂ ಜೈಲಿನಲ್ಲಿ ಕೂಳೆಹಾಕುವರಂತೆ. ಅನ್ಯಾ ಯವು ನಡೆದು ಅಧಿಕಾರಿಗಳೊಂದಿಗೆ ನ್ಯಾಯಕ್ಕಾಗಿ ಮೊರೆಯಿಟ್ಟಾಗ ಪ್ರಥ ಮ ಚಿಕಿತ್ಸೆ ಜೈಲುವಾಸ ! ಹೀಗೆಯೆ ಪ್ರಜೆಸ್ಸಿ ಪ್ರಾಂತ್ಯಗಳಲ್ಲಿಯೂ ಫಿರ್ಯಾದಿಗೇ ಮೊದಲು ಶಿಕ್ಷೆಯಂತೆ !

(ಮಾ. ಭೂ.)

ವುಡ್‌ಲ್ಯಾಂಡ್ಸ್

ತಾ|| **29-6-47** ರಿಂದ

ಜನಭರಿತವಾದ 9 ನೇವಾರ

ಪ್ರತಿದಿನ **3** ಆಟಗಳು

* ಟಿ. ಆರ್. ಮಹಾಲಿಂಗಂ
* ಬಿ. ಆರ್. ಪಂತಂಲು
* ಸಾರಂಗಪಾಣಿ
* ಬೇಬಿ ಕಮಲ

ಪಾತ್ರವಹಿಸಿರುವ

ನಾವು ಇಬರು ಬ

(ತಮಿಳು)



ಬಾಲೆಯರು ತಮ್ಮ ಸ್ವಂತ ವಿಮಾನ ಹೊಂದಿರುವುದು

SHAKTI SUDHA

A Superb TONIC

At Opera 11th Glorious Week

RAJAKUMARI

ಟಿ. ಎಸ್. ಬಾಲಯ್ಯ, ತವಮಣಿದೇವಿ, ಮೂಲತಿ ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೆಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಸತ್ಯವಾದಿ ಅರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ ರೂ. 9.

ಸೋಮವಾರದ ಸಂಚಿಕೆ ಮಾತ್ರ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Edited, Printed and Publishedby M. S Krishna Rao at the Satyavadi Press Chamaraj Agrahar, Mysore.